

## ವಿಶ್ವದ ದುಬಾರಿ ಮಾವುಗಳಿವು

- **ಮಿಯಾಝಾಕಿ:** ಜಪಾನ್ ದೇಶದ ಈ ಹಣ್ಣು ಕೆಂಪು ಬಣ್ಣದಿಂದ ಕೂಡಿರುತ್ತದೆ. ತುಂಬಾ ಸಿಹಿಯಾಗಿರುವ ಈ ಹಣ್ಣನ್ನು ಪ್ರತಿ ಕೆ.ಜಿ.ಗೆ 25 ಸಾವಿರದಿಂದ 30 ಸಾವಿರದವರೆಗೆ ಮಾರಾಟ ಮಾಡಲಾಗುತ್ತದೆ. ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಮೇಳಗಳು, ಮಾವು ಮೇಳಗಳಲ್ಲಿ ಈ ಹಣ್ಣು ಎಲ್ಲರ ಕಣ್ಣು ಕುಕ್ಕುತ್ತದೆ. ಅಂದ ಹಾಗೆ ಇದರ ಒಂದು ಕಾಯಿಯ ಬೆಲೆಯೇ 3 ಸಾವಿರ!
- **ನೂರ್‌ಜಹಾನ್:** ಮಧ್ಯಪ್ರದೇಶದ ದೊಡ್ಡ ಮತ್ತು ಅಪರೂಪದ ತಳಿ ಇದಾಗಿದೆ. ಇದರ ಒಂದು ಕಾಯಿ 500ರಿಂದ 1000ಕ್ಕೆ ಮಾರಾಟವಾಗುತ್ತದೆ.
- **ಅಲ್ಫಾನ್ಸೊ(ಹ್ಯಾಪಸ್):** ಭಾರತದ ಕೆನೆಭರಿತವಾದ ಈ ಸಿಹಿ ಹಣ್ಣು ಜಾಗತಿಕವಾಗಿಯೂ ಜನಪ್ರಿಯವಾಗಿದೆ. ಕೆ.ಜಿ.ಗೆ 400ರಿಂದ 800ರವರೆಗೆ ಮಾರಾಟವಾಗುತ್ತದೆ.
- **ಕೊಹಿನೂರ್:** ಭಾರತದ ಈ ಹಣ್ಣು ಸಿಹಿ ಮತ್ತು ಸ್ವಲ್ಪ ಕಟುವಾಗಿದ್ದು, ಸುವಾಸನೆಭರಿತವಾಗಿದೆ. ಕೆ.ಜಿ.ಗೆ 600ರಿಂದ 1200ಕ್ಕೆ ಮಾರಾಟವಾಗುತ್ತದೆ.
- **ಹಾಕುಗಿನ್ ನೋ ತೈಯೊ:** ಜಪಾನ್ ದೇಶದ ಉದ್ದದ ಈ ಹಣ್ಣು ಅತ್ಯಂತ ಸಿಹಿಯಾಗಿದೆ. ಉತ್ತರ ಭಾರತದಲ್ಲೂ ಜನಪ್ರಿಯವಾಗಿರುವ ಈ ಹಣ್ಣನ್ನು 300ರಿಂದ 600ಕ್ಕೆ ಮಾರಾಟ ಮಾಡಲಾಗುತ್ತದೆ.
- **ಇಮಾಮ್ ಪಸಂದ್:** ಭಾರತದ ರಸಭರಿತ ಸುವಾಸನೆಯ ಈ ಹಣ್ಣನ್ನು ಕೆ.ಜಿ.ಗೆ 350ರಿಂದ 700ಕ್ಕೆ ಮಾರಾಟವಾಗುತ್ತವೆ.
- **ಚೌನ್ಸಾ:** ಪಾಕಿಸ್ತಾನದ ತುಂಬಾ ಸಿಹಿ ಮತ್ತು ಪರಿಮಳಯುಕ್ತವಾದ ಈ ಹಣ್ಣನ್ನು ಭಾರತದಲ್ಲಿ ಕೆ.ಜಿ.ಗೆ 200ರಿಂದ 400ಕ್ಕೆ ಮಾರಲಾಗುತ್ತದೆ.
- **ಲ್ಯಾಂಗ್ರಾ:** ಭಾರತದ ಈ ಹಣ್ಣು ಹಸಿರು ಸಿಪ್ಪೆಯೊಂದಿಗೆ ವಿಶಿಷ್ಟ ಪರಿಮಳ ಹೊಂದಿದೆ. ಕೆ.ಜಿ.ಗೆ 300ಕ್ಕೆ ಮಾರಾಟ ಮಾಡಲಾಗುತ್ತದೆ.
- **ಕೀಟ್:** ಈಜಿಪ್ಟ್ ದೇಶದ ಈ ಹಣ್ಣು ಸಿಹಿ ಜೊತೆಗೆ ಸ್ವಲ್ಪ ಹುಳಿ ಸಹ. ಭಾರತದಲ್ಲಿ ಕೆ.ಜಿ.ಗೆ 250ರಿಂದ 500 ಮಾರಾಟವಾಗುತ್ತದೆ.



ಮೈಸೂರಿನ ಕ್ರಾಫರ್ಡ್ ಭವನದ ಎದುರು ಮಾವು ಖರೀದಿ ಮಾಡುತ್ತಿರುವ ವಿದ್ಯಾರ್ಥಿನಿ ಚಿತ್ರ: ಅನೂಪ್ ರಾಘ ಟಿ.